ನೋಡುವುದನ್ನು ಇನ್ನೂ ಕಲಿತುಕೊಂಡಿಲ್ಲ. ಶ್ರವಣ ದೋಷಕ್ಕೆ ಒಳಗಾದವನನ್ನು ಕೆಪ್ಪ ಎಂದೋ, ಮಾತನಾಡಲು ಬಾರದವರನ್ನು ಮೂಗ ಎಂದೋ, ದೈಹಿಕ ಅಂಗವಿಕಲರನ್ನು ಕುಂಟ ಎಂದೋ, ಅಂಧರನ್ನು ಏ ಕುರುಡಾ ಎಂದು ಕರೆಯುವುದನ್ನು ನಿಲ್ಲಿಸಿಲ್ಲ. ಈ ಧೋರಣೆಯನ್ನು ಸಮಾಜ ಬದಲಾಯಿಸಿಕೊಂಡರೆ ಅಂಗವಿಕಲರು ಸಮಾಜಕ್ಕೆ ಇನ್ನಷ್ಟು ಕೊಡುಗೆಯನ್ನು ನೀಡುತ್ತಾರೆ.

ಯಾರನ್ನೂ ಕಿವುಡ–ಮೂಗ ಎಂದು ಕರೆಯಬೇಡಿ ಎಂದರೆ ವಿದ್ಯಾವಂತರೂ ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಕಿವಿ ಕೇಳದೇ ಇರುವುದರಿಂದ ಅವರಿಗೆ ಮಾತು ಬರುವುದಿಲ್ಲ. ಮಾತು ಬಾರದೇ ಇರುವುದು ಅವರ ತಪ್ಪಲ್ಲ. ನಾವು ಅವರಿಗೆ ಮಾತು ಕಲಿಸಿಲ್ಲ. ಅದಕ್ಕೆ ಅವರು ಮಾತನಾಡುತ್ತಿಲ್ಲ ಎಂಬ ಸಾಮಾನ್ಯ ಜ್ಞಾನ ಕೂಡ ವಿದ್ಯಾವಂತರಿಗೂ ಇರುವುದಿಲ್ಲ. ಶ್ರವಣ ದೋಷವುಳ್ಳ ಮಕ್ಕಳಿಗೆ ಮಾತು ಕಲಿಸುವುದು ಕಷ್ಟದ ಕೆಲಸ. ಆದರೆ ಅಸಾಧ್ಯವೇನಲ್ಲ. ಕಿವುಡ ಮಕ್ಕಳು ಮಾತು ಕಲಿತು ಉತ್ತಮ ಭಾಷಣಕರರಾದ, ನಾಟಕಗಳಲ್ಲಿ ಪಾತ್ರ ಮಾಡಿದ ಉದಾಹರಣೆಗಳೂ ನಮ್ಮ ಮುಂದೆ ಇವೆ. ಇದಕ್ಕೆ ಬಹುತೇಕ ತಾಯಿ ಕಾರಣ. ಮಗುವಿನ ಎಲ್ಲ ನ್ಯೂನತೆಗಳನ್ನೂ ಸರಿ ಮಾಡುವ ತಾಕತ್ತು ಇರುವುದು ತಾಯಿಗೆ ಮಾತ್ರ. ಅದಕ್ಕೇ ಮೈಸೂರಿನಲ್ಲಿ 'ಕಿವುಡು ಮಕ್ಕಳ ತಾಯಂದಿರ ಶಾಲೆ'ಯೇ ಇದೆ. ಅಲ್ಲಿ ತಾಯಂದಿರು ತಮ್ಮ ಕಿವುಡು ಮಕ್ಕಳಿಗೆ ಮಾತು ಕಲಿಸುತ್ತಾರೆ. ಕೇವಲ ನಾಲ್ಕು ವರ್ಷಗಳಲ್ಲಿ ಪವಾಡ ಮಾಡುತ್ತಾರೆ. ಕಿವಿ ಕೇಳದೆ ಮಾತನಾಡಲು ಬಾರದೆ ಇರುವ ಮಕ್ಕಳು ನಾಲ್ಕು ವರ್ಷದಲ್ಲಿ ಎಲ್ಲರಂತೆಯೇ ಮಾತು ಕಲಿತುಬಿಡುತ್ತಾರೆ. ಇದಕ್ಕೆ ತಾಯಿಯೇ ಕಾರಣ. ಅಮ್ಮ ಎಂದು ಹೇಳಲು ಬಾರದ ಮಗು ಈ ಶಾಲೆಗೆ ಸೇರಿ ಮಾತು ಕಲಿತು, ನಂತರ ಎಲ್ಲ ಮಕ್ಕಳಂತೆ ಒಂದನೇ



ಚಿತ್ರ/ ರಂಜು ಪಿ

## ಕ್ರೀಡಾಲೋಕದ ಪುಣ್ಯ!

ಬೆಂಗಳೂರಿನ ಜೈನ್ ಕಾಲೇಜಿನಲ್ಲಿ ಮೊದಲ ಬಿ.ಕಾಂ. ಓದುತ್ತಿರುವ ಪುಣ್ಯಕೀರ್ತಿ ಕ್ರೀಡಾಲೋಕದ ಪ್ರತಿಭೆ. ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಪದಕಗಳನ್ನು ಬಾಚಿಕೊಂಡಿದ್ದಾಳೆ. ನೂರು, ಇನ್ನೂರು ಮತ್ತು ನಾನ್ನೂರು ಮೀಟರ್ ಓಟದಲ್ಲಿ ಓಡುವ ಪುಣ್ಯ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತಿಯನ್ನು ಪಡೆಯುತ್ತಿದ್ದಾಳೆ. ಮಾತು ಕಲಿತು ಸಾಮಾನ್ಯ ಶಾಲೆಯಲ್ಲಿ ಮೊದಲನೆ ತರಗತಿಯಲ್ಲಿ ಓದುತ್ತಿರುವಾಗಲೇ ಅವಳಿಗೆ ಓಟದ ಬಗ್ಗೆ ಆಸಕ್ತಿ ಮೂಡಿತು. ಶಾಲಾ ದಿನಗಳಲ್ಲಿ ಅದನ್ನು ಮುಂದುವರಿಸಿಕೊಂಡು ಬಂದ ಪುಣ್ಯ, ನಂತರ ಭಾರತೀಯ ಕ್ರೀಡಾ ಪ್ರಾಧಿಕಾರ ನಡೆಸುವ ಬೇಸಿಗೆ ಶಿಬಿರ ಸೇರಿ ಸಾಕಷ್ಟು ತರಬೇತಿ ಪಡೆದಳು. ನಂತರ 2012ರಲ್ಲಿ ಅಧಿಕೃತವಾಗಿಯೇ ಅಲ್ಲಿ ತರಬೇತಿಗೆ ಹಾಜರಾದಳು. 2013ರಲ್ಲಿಯೇ ಅದರ ಪ್ರತಿಫಲ ಕಂಡುಬಂತು. 2013ರಲ್ಲಿ ಅವಳು ಮೊದಲ ಪದಕ ಪಡೆದಳು. ಸಿಬಿಎಸ್ಸಿ ಪಠ್ಯಕ್ರಮದಲ್ಲಿ 10ನೇ ತರಗತಿ ಮುಗಿಸಿದ ಪುಣ್ಯ ಪಿ.ಯು.ಸಿ.ಯಲ್ಲಿ ಶೇ 73ರಷ್ಟು ಅಂಕ ಪಡೆದಿದ್ದಾಳೆ. ಪ್ರತಿ ದಿನ ಬೆಳಿಗ್ಗೆ 5.30ರಿಂದ 7.30ರವರೆಗೆ ಹಾಗೂ ಸಂಜೆ 4.30ರಿಂದ 7ರವರೆಗೆ ಓಟದ ತರಬೇತಿ ಪಡೆಯುತ್ತಾಳೆ. ಆದರ ನಡುವೆ ಕಾಲೇಜಿನ ಓದಿನಲ್ಲಿಯೂ ಮುಂದಿದ್ದಾಳೆ. ಪುಣ್ಯ ತನ್ನ 8ನೇ ವಯಸ್ಸಿನಲ್ಲಿ ಕಾಕ್ಲಿಯರ್ ಇಂಪ್ಲಾಂಟ್ ಮಾಡಿಸಿಕೊಂಡಿದ್ದಾಳೆ. ಇದರಿಂದ ಆಕೆಗೆ ಶಬ್ದಗಳನ್ನು ಕೇಳಿಸಿಕೊಳ್ಳುವುದು ಸುಲಭವಾಗಿದೆ. ಈಗ ಆಕೆ ಹಾಡುಗಳನ್ನೂ ಕೇಳಿಸಿಕೊಳ್ಳುತ್ತಾಳೆ.




## ಯಾರಿಗೂ ಬಾಗಿಲ್ಲ ಮಹಾಂತ ಬಾಗಿ

ಮಹಾಂತ ಬಾಗಿ ತನ್ನ ಶ್ರವಣ ದೋಷವನ್ನು ಮೆಟ್ಟಿನಿಂತು ಈಗ ವೈದ್ಯನಾಗುವ ಹಂತದಲ್ಲಿದ್ದಾರೆ. ಶ್ರವಣ ದೋಷವುಳ್ಳ ಮಕ್ಕಳು ಸಾಮಾನ್ಯವಾಗಿ ಎಂಜಿನಿಯರಿಂಗ್ ಅಥವಾ ಇತರೆ ವೃತ್ತಿಯ ಬಗ್ಗೆ ಆಸಕ್ತಿ ಹೊಂದುವುದು ಸಾಮಾನ್ಯ. ಆದರೆ ಮಹಾಂತ ಬಾಗಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ. ಸದ್ಯ ಅವರು ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಮೂರನೇ ವರ್ಷದಲ್ಲಿದ್ದಾರೆ. ಮಹಾಂತ ಅವರಿಗೆ ಚಿಕ್ಕಂದಿನಿಂದಲೂ ವೈದ್ಯನಾಗುವ ಹಂಬಲ ಇತ್ತು. ಹತ್ತನೇ ತರಗತಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಪಡೆದಿದ್ದ ಅವರು ಸಿಇಟಿ ಮತ್ತು ನೀಟ್‌ನಲ್ಲಿಯೂ ಒಳ್ಳೆಯ ರ‍್ಯಾಂಕ್ ಪಡೆದಿದ್ದರು. ಸಿಇಟಿ ರ‍್ಯಾಂಕ್ ಮೂಲಕ ಅವರಿಗೆ ಬೆಂಗಳೂರಿನ ಆರ್.ವಿ.ಕಾಲೇಜಿನಲ್ಲಿ ಎಂಜಿನಿಯರಿಂಗ್ ಸೀಟು ಸಿಕ್ಕಿತ್ತು. ಅಲ್ಲಿಗೆ ಸೇರಿದ್ದರು ಕೂಡ. ಆಗ ಅವರಲ್ಲಿ ವೈದ್ಯನಾಗುವ ಅವಕಾಶ ತಪ್ಪಿತಲ್ಲ ಎಂಬ ನಿರಾಸೆ ಮೂಡಿತ್ತು. ಆದರೆ ನಂತರ ನೀಟ್ ಫಲಿತಾಂಶ ಬಂದು ಅವರಿಗೆ ಸರ್ಕಾರಿ ಕೋಟಾದಲ್ಲಿಯೇ ಸೀಟು ಸಿಕ್ಕಿದ್ದರಿಂದ ತಮ್ಮ ಬಯಕೆಯನ್ನು ಈಡೇರಿಸಿಕೊಂಡ ತೃಪ್ತಿ ಕಾಣುತ್ತಿದೆ. ಮೂಲತಃ ಬೆಳಗಾವಿ ಜಿಲ್ಲೆಯವರಾದ ಮಹಾಂತ ಅವರಿಗೆ ಸರ್ಜನ್ ಆಗುವ ಬಯಕೆ ಇದೆ. ಆ ದಿಕ್ಕಿನಲ್ಲಿಯೇ ಅವರು ಯತ್ನ ನಡೆಸಿದ್ದಾರೆ. ಶ್ರವಣ ದೋಷಕ್ಕೆ ಒಳಗಾದವರು ವೈದ್ಯಕೀಯ ಶಿಕ್ಷಣ ಪಡೆಯುವುದು ಕಷ್ಟ. ಆದರೆ ನಾನು ಅದಕ್ಕೆ ಹೆದರುವುದಿಲ್ಲ ಎಂಬ ವಿಶ್ವಾಸ ಅವರದ್ದು.